Sri H. SIDDAVEERAPPA.—You said there are three workers there. May I know how many are there on the managerial side and what is the wage paid to the three workers and the staff on the managerial side?

Sri A. P. APPANNA.—Sir, I have said that there are only three workers and the management. The worker is taken on contract basis as and when he is required. There is no permanent workers system as such.

ಶ್ರೀ ಎಚ್. ಲೋಕಯ್ಯನಾಯಕ್. - ಆ ಕಾರ್ಖಾನೆಯ ಟ್ರಾಕ್ಟರನ್ನು ಬಹಿರಂಗ ಹರಾಜಿನಲ್ಲಿ ಮಾರಿದ್ದಾರೆಂದು ಗೊತ್ತಾಗಿದೆ. ಅದರಲ್ಲಿ ಎಷ್ಟು ಹಣ ಬಂದಿದೆ?

ಶ್ರೀ ಎ. ಪಿ. ಅಪ್ಪಣ್ಣ.—ಆ ಕಾರ್ಖಾನೆಯ ಟ್ರಾಕ್ಟರನ್ನು ಬಹಿರಂಗ ಹರಾಜಿಗೆ ಇಟ್ಟು ಅದನ್ನು ಎರ್ಡಾ ಮುಖ್ಯ ಪತ್ರಿಕೆಗಳಲ್ಲೂ ಪ್ರಕಟಣೆ ಮಾಡಿ ಅನಂತರ ಅದಕ್ಕೆ ಟೆಂಡರ್ ಕಾರ್ಯಾಚಾರ್ ಮಾಡಿ ಅದನ್ನು ಹೆಚ್ಚಿನ ಬಿಡ್ಡರಿಗೆ ಕೊಟ್ಟಿದೆ. ಅದರಿಂದ ಎಷ್ಟು ಹಣ ಬಂದಿದೆ ಎಂಬುದು ಗೊತ್ತಿಲ್ಲ. ಬೇಕಾದರೆ ಮಾನ್ಯ ಸದಸ್ಯರಿಗೆ ತರಿಸಿ ಕೊಡುತ್ತೇನೆ. It should not be accused that we have done it without giving proper publicity.

Penicillin Reaction Cases

17. Sri SADASHIVAPPA PATIL (Deodurg).—

Will the Minister for Health be pleased to state :—

(*a*) the number of Penicillin reaction cases that have come to their notice during 1967-68;

(*b*) the action taken in the matter?

Ans.—Sri Y. RAMAKRISHNA (Minister for Health).—

(*a*) 52.

(*b*) Proper action has been taken to treat all of them and all have recovered.

ಶ್ರೀ ಸದಾಶಿವಪ್ಪ ಪಾಟೀಲ್.—ಸ್ಯಾಮಿ, ಇಲ್ಲಿ ನನ್ನ ಪ್ರಶ್ನೆಗೆ ಉತ್ತರವಾಗಿ 52 ಪ್ರಕರಣಗಳಿಗೆ ಎಲ್ಲರಿಗೂ ಚಿಕಿತ್ಸೆ ನೀಡಲು ಸೂಕ್ತ ಕ್ರಮಗಳನ್ನು ಕೈಗೊಳ್ಳರಾಗಿದ್ದು ಎಲ್ಲರೂ ಗುಣಮುಖರಾಗಿದ್ದಾರೆ ಎಂದು ಹೇಳಿದ್ದೀರಿ. ಈ ಮನೆಯ ಮಾನ್ಯ ಸದಸ್ಯರೊಬ್ಬರಿಗೆ ಈ ರೀತಿ ಪೆನ್ಸಿಲಿನ್ ರೀಆಕ್ಷನ್ ಆಗಿ ಅವರು 24 ಘಂಟೆಗಳ ಕಾಲ ಜ್ಞಾನ ತಪ್ಪಿದ್ದಿದ್ದು ತಮ್ಮ ಗಮನಕ್ಕೆ ಬಂದಿದೆಯೇ?

† ಶ್ರೀ ವೈ. ರಾಮಕೃಷ್ಣ.—ನಾನು ಅದನ್ನು ಪತ್ರಿಕೆಯಲ್ಲಿ ಓದಿದ್ದೇನೆ.

ಶ್ರೀ ಸದಾಶಿವಪ್ಪಪಾಟೀರ್—ಚಿಕಿತ್ಸೆ ನೀಡಲು ಎಲ್ಲಾ ಕ್ರಮಗಳನ್ನೂ ಕೈಗೊಳ್ಳರಾಗಿದೆ ಎಂದು ಹೇಳಿದ್ದೀರಿ. ಅದಕ್ಕೆ ಯಾವ ಮೆಡಿಸಿನ್, ಯಾವ ಇಂಜಕ್ಷನ್ ಉಪಯೋಗ ಮಾಡಿದ್ದಾರೆ ಎಂಬುದನ್ನು ತಿಳಿಸುತ್ತೀರಾ?

Sri Y. RAMAKRISHNA.—Medicine like Adrolin, Koromin and Oxygen.

ಶ್ರೀ ಎಚ್. ಪುಟ್ಟದಾಸ.—ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕೆಲವು ದಿವಸಗಳ ಹಿಂದೆ ಒಬ್ಬ ರೋಗಿಗೆ ಟೆಸ್ಟ್ ಡೋಸ್ ಕೊಡುವುದಕ್ಕೆ ಹೋಗಿ ಯಾವುದೋ ರಾಂಗ್ ಇಂಜಕ್ಷನ್ ಕೊಟ್ಟು ಆ ರೋಗಿ ಸ್ಥಳದಲ್ಲೇ ಸತ್ತಿರುವುದು ನಿಜವೇ? ಹಾಗಿದ್ದರೆ ಆ ವೈದ್ಯರ ಬಗ್ಗೆ ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದೀರಿ?

Sri Y. RAMAKRISHNA.—Let the hon. member write to me and I will call for the report.

ಶ್ರೀ ಸದಾಶಿವಪ್ಪ ಪಾಟೀಲ್.—ಪೆನ್ಸಿಲಿನ್ ರೀ-ಆಕ್ಷನ್ನಿನಿಂದ ಉಂಟಾಗಬಹುದಾದ ಸಾವನ್ನು ತಪ್ಪಿಸುವುದಕ್ಕಾಗಿ ಯಾವ ಯಾವ ಆಸ್ಪತ್ರೆಯಲ್ಲಿ ಏನೇನು ವ್ಯವಸ್ಥೆ ಮಾಡಿದ್ದೀರಿ ?

ಶ್ರೀ ವೈ. ರಾಮಕೃಷ್ಣ.—ದೊಡ್ಡ ದೊಡ್ಡ ಆಸ್ಪತ್ರೆಗಳಲ್ಲಿ, ಸಿಟಿ ಆಸ್ಪತ್ರೆಗಳಲ್ಲಿ ಮೆಡಿಕಲ್ ಕಾಲೇಜುಗಳಿಗೆ ಅಟ್ಯಾಚ್ ಆಗಿರುವ ಆಸ್ಪತ್ರೆಗಳಲ್ಲಿ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಲು ಇನ್‌ಸ್ಟ್ರಕ್ಷನ್ ಕೊಟ್ಟಿದ್ದೇವೆ. ರೋಗಿಯು ಆ ಆಸ್ಪತ್ರೆಗಳಿಗೆ ಹೋದಕೂಡಲೇ ಪೆನ್ಸಿಲಿನ್ ರೀ-ಆಕ್ಷನ್ ಏನಾದರೂ ನಿಮಗೆ ಇದೆಯೇ ಎಂದು ಡಾಕ್ಟರು ರೋಗಿಯನ್ನು ಕೇಳುತ್ತಾರೆ. ಆ ರೀತಿ ಏನಾದರೂ ಅವರಿಗೆ ಇದ್ದರೆ ಅದನ್ನು ತಡೆಗಟ್ಟುವುದಕ್ಕೆ ಏನು ಕೊಡಬೇಕೋ ಅದನ್ನು ಕೊಡುತ್ತಾರೆ. ಅದು ಗೊತ್ತಾಗದಿದ್ದರೆ ಟೆಸ್ಟ್ ಡೋಸ್ ಕೊಟ್ಟು ಅದರ ಪರಿಣಾಮ ಏನು ಎಂಬುದನ್ನು ತಿಳಿದುಕೊಂಡು ಅದಕ್ಕೆ ಏನು ಔಷಧಿಯನ್ನು ಕೊಡಬೇಕೋ ಅದನ್ನು ಕೊಡುತ್ತಾರೆ.

ಶ್ರೀ ಸದಾಶಿವಪ್ಪ ಪಾಟೀಲ್.—ಈಗ ಈ ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರದಲ್ಲಿ 52 ಕೇಸುಗಳನ್ನೇನು ಕೊಟ್ಟಿದ್ದೀರಿ, ಇದರಲ್ಲಿ ಪ್ರೈವೇಟ್ ಆಸ್ಪತ್ರೆಗಳಿಗೆ ಸಂಬಂಧಪಟ್ಟ ಕೇಸುಗಳು ಎಷ್ಟು ಇವೆ, ಸರ್ಕಾರಿ ಆಸ್ಪತ್ರೆಗಳಿಗೆ ಸಂಬಂಧಪಟ್ಟ ಕೇಸುಗಳು ಎಷ್ಟು ಇವೆ ?

ಶ್ರೀ ವೈ. ರಾಮಕೃಷ್ಣ.—ಇಲ್ಲಿ ಕೊಟ್ಟಿರತಕ್ಕ ಸಂಖ್ಯೆ ಸರ್ಕಾರಿ ಆಸ್ಪತ್ರೆಗಳಿಗೆ ಮಾತ್ರ ಅನ್ವಯಿಸುತ್ತದೆ.

ಶ್ರೀ ಎಚ್. ಪುಟ್ಟಪ್ಪ.—ದೊಡ್ಡ ದೊಡ್ಡ ಆಸ್ಪತ್ರೆಗಳಲ್ಲಿ ವಿಶೇಷ ಔಷಧಿಯನ್ನು ಇಟ್ಟಿದ್ದೇವೆಂದು ಹೇಳಿದಿರಿ. ಹಾಗಾದರೆ ಪೆನ್ಸಿಲಿನ್ ಪ್ರತಿಕ್ರಿಯೆ ಉಂಟಾಗುವುದನ್ನು ನಿವಾರಣೆ ಮಾಡಲು ಪ್ರತಿಯೊಂದು ಆಸ್ಪತ್ರೆಯಲ್ಲಿಯೂ ಚಿಕಿತ್ಸೆ ನಡೆಸುವಾಗ ಅಲ್ಲಿ ಆಗತಕ್ಕ ಅನಾಹುತವನ್ನು ತಪ್ಪಿಸುವುದಕ್ಕೆ ಏನು ಪ್ರಯತ್ನ ಮಾಡಿದ್ದೀರಾ ?

ಶ್ರೀ ವೈ. ರಾಮಕೃಷ್ಣ.—ಆ ಬಗ್ಗೆ ಕ್ರಮ ಕೈಗೊಂಡಿದ್ದೇವೆ, ಸಂಬಂಧಪಟ್ಟವರಿಗೆ ಇನ್‌ಸ್ಟ್ರಕ್ಷನ್ ಕೊಟ್ಟಿದ್ದೇವೆ.

ಶ್ರೀ ಎಂ. ಎನ್. ರಾಮಣ್ಣ.—ಇಲ್ಲಿರುವ 52 ಕೇಸುಗಳಲ್ಲಿ ಯಾವ ಯಾವ ಆಸ್ಪತ್ರೆಗಳಲ್ಲಿ ಎಷ್ಟೆಷ್ಟು ಜನ ಇಂತಹ ಚಿಕಿತ್ಸೆಗೆ ಒಳಗಾಗಿದ್ದಾರೆ ಎನ್ನುವ ವಿವರಗಳನ್ನು ಕೊಡುತ್ತೀರಾ ?

ಶ್ರೀ ವೈ. ರಾಮಕೃಷ್ಣ.—52 ಕೇಸುಗಳ ವಿವರಗಳು ಹೀಗಿವೆ.

ಕೊಡಗಿನಲ್ಲಿ	5
ಧಾರವಾಡದಲ್ಲಿ	5
ಗುಲ್ಬರ್ಗಾದಲ್ಲಿ	3
ಹಾಸನದಲ್ಲಿ	2
ಕೋಲಾರದಲ್ಲಿ	1
ನಾರ್ತ್‌ಕೆನರಾದಲ್ಲಿ	1
ಮೈಸೂರಿನಲ್ಲಿ	1
ಮಂಡ್ಯದಲ್ಲಿ	25
ರಾಯಚೂರಿನಲ್ಲಿ	2
ಹಾಗೂ ತುಮಕೂರಿನಲ್ಲಿ	2

Sri H. SIDDAVEERAPPA.—Has it come to the notice of Government that not only there are penicillin reaction injections, but there are also certain deadly products of penicillin by very touch of which there is reaction to some people ? Have Government taken any action to see the reasons for this ?

ಶ್ರೀ ವೈ. ರಾಮಕೃಷ್ಣ.—ಇದರ ವಿಚಾರದಲ್ಲಿ ಪರಿಶೀಲನೆ ಮಾಡಲಾಗಿದೆ. ಇವನ್ನೆಲ್ಲಾ ಗವರ್ನಮೆಂಟು ಆಫ್ ಇಂಡಿಯಾದ ಫ್ಯಾಕ್ಟರಿಗಳಲ್ಲೇ ಮಾಡುತ್ತಾರೆ. ಇಂತಹ ಪ್ರಸಂಗದಲ್ಲಿ ಎಲ್ಲೋ ಒಂದು ಲಕ್ಷಕ್ಕೆ ಒಂದೊಂದು ಕೇಸುಗಳು ಇರಬಹುದು ಮತ್ತು ಇದಕ್ಕೆ ಸೂಕ್ತವಾದ ಚಿಕಿತ್ಸೆಗಳನ್ನೂ ಮಾಡಲಾಗುತ್ತಿದೆ.